(ಸಾಕ್ಷಿಯನ್ನು ದಿನಾಂಕಃ 26.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು. )

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರುಃ ಶ್ರೀ ಹೆಚ್ ಎಂ ರವರಿಂದ**

ವಳಗೆರೆಹಳ್ಳಿ ಮನೆಯನ್ನು ನನ್ನ ತಂದೆ ಕಟ್ಟಿಸಿರುತ್ತಾರೆ. 2004 ರಲ್ಲಿ ಸದರಿ ಮನೆಯ ಗೃಹಪ್ರವೇಶವಾಗಿದೆ. ಆಗ ನನ್ನ ತಂದೆ ಕೆಲಸದಲ್ಲಿದ್ದರು. ಗೃಹಪ್ರವೇಶವಾದಾಗ ಸ್ವಯಂ ನಿವೃತ್ತಿಯಾಗಿದ್ದರು. ಅವರು ಸ್ವಯಂನಿವೃತ್ತಿಯಾದಾಗ ಅವರಿಗೆ ಎಷ್ಟು ಹಣ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಐಟಂ ನಂಃ 3 ಮನೆಗೆ ಸಂಬಂಧಪಟ್ಟಂತೆ ಒಂದು ದಾನಪತ್ರವಾಗಿದೆ ಎಂದರೆ ಸರಿ. ಆ ಪತ್ರದ ಬಗ್ಗೆ ನನಗೆ ಗೊತ್ತಿಲ್ಲ, ನನ್ನ ತಂದೆ ಬರೆದಿರುತ್ತಾರೆ. ಆ ಪತ್ರದ ಬಗ್ಗೆ ನನಗೆ ಗೊತ್ತಿಲ್ಲ. ಆ ನಂತರ ಗೊತ್ತಾಗಿರುತ್ತದೆ. ದಾನಪತ್ರವನ್ನು ನನ್ನ ತಂದೆ, ನನ್ನ ಮಕ್ಕಳ ಹೆಸರಿಗೆ ಬರೆದುಕೊಟ್ಟಿರುತ್ತಾರೆ. ಆ ಬಗ್ಗೆ ನಾನು ನನ್ನ ಮಕ್ಕಳನ್ನು ಕೇಳಿರುತ್ತೇನೆ. ಅವರು ಸರಿಯಾದ ಉತ್ತರ ಕೊಡಲಿಲ್ಲ. ನನ್ನ ಮೊಮ್ಮಕ್ಕಳು ನನ್ನನ್ನು ನೋಡಿಕೊಂಡರು ಆದರಿಂದ ಅವರಿಗೆ ದಾನಪತ್ರ ಬರೆದುಕೊಟ್ಟಿರುವುದಾಗಿ ಹೇಳಿರುತ್ತಾರೆ. ಸದರಿ ಆಸ್ತಿ ನನ್ನ ತಾತನ ಆಸ್ತಿಯಿಂದ ಸಂಪಾದಿಸಿದ ಆಸ್ತಿಯಾಗಿತ್ತು. ಅವರಿಗೆ ಆಸ್ತಿಯ ಮೇಲೆ ಹಕ್ಕಿದ್ದ ಕಾರಣ ದಾನಪತ್ರ ಬರೆದಿರುತ್ತಾರೆ. ದಾನಪತ್ರದ ಆಧಾರದ ಮೇಲೆ ನನ್ನ ಮಕ್ಕಳಿಗೆ ಹಕ್ಕು ಬಂದಿರುತ್ತದೆ. ನನ್ನ ತಂದೆ ಸಹ ತನ್ನ ಪರವಾಗಿ ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ. ದಾವಾಸ್ವತ್ತು 1 ಮತ್ತು 3 ತನ್ನ ಸ್ವಯಾರ್ಜಿತ ಆಸ್ತಿಗಳು ಎಂದು ಹೇಳಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ನಮ್ಮ ವಕೀಲರು ಹೇಳಿರುತ್ತಾರೆ. ದಾನಪತ್ರವನ್ನು ಓದಿಯೇ ಅವರುಗಳನ್ನು ಪಕ್ಷಗಾರನ್ನಾಗಿ ಮಾಡಲಾಗಿರುತ್ತದೆ. ದಾನಪತ್ರದಲ್ಲಿರುವ ಆಸ್ತಿ ತನ್ನ ಸ್ವಯಾರ್ಜಿತ ಆಸ್ತಿ ಎಂದು ನನ್ನ ತಂದೆ ಹೇಳಿರುತ್ತಾರೆ. ದಾನಪತ್ರದ ಬಗ್ಗೆ ನನ್ನ ದಾವೆಯಲ್ಲಿ ತಿದ್ದುಪಡಿ ಮಾಡಿಲ್ಲ. ದಾವಾಸ್ವತ್ತು ಐಟಂ ನಂಃ 2 ಮಾತ್ರ ನಮ್ಮ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಅದರ ವ್ಯವಸಾಯವನ್ನು ಈಗ ನನ್ನ ಅಣ್ಣ ಮಾಡುತ್ತಿದ್ದಾರೆ. ದಾವಾಸ್ವತ್ತು ಐಟಂ ನಂಃ 1 ಮತ್ತು 3 ರ ಆಸ್ತಿಯನ್ನು ನಮ್ಮ ತಂದೆ ಕ್ರಯಕ್ಕೆ ಪಡೆದಾಗ ಅದರ ವ್ಯವಹಾರಕ್ಕೆ ನಾನು ಹೋಗಿಲ್ಲ. ದಾವಾಸ್ವತ್ತು ಐಟಂ ನಂಃ 1 ರ ಕ್ರಯಪತ್ರವನ್ನು ನೋಡಿರುತ್ತೇನೆ. ನನ್ನ ತಂದೆ ವಿ ವಿ ಕೃಷ್ಣಪ್ಪ ರವರಿಂದ ಖರೀದಿಸಿರುತ್ತಾರೆ. ಎಷ್ಟು ಹಣಕ್ಕೆ ಖರೀದಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ಆ ಆಸ್ತಿಯನ್ನು ಖರೀದಿ ಮಾಡಿದಾಗ ನಾನೇ ಹುಟ್ಟಿಯೇ ಇರಲಿಲ್ಲ. ಆ ಆಸ್ತಿಯನ್ನು ನನ್ನ ತಂದೆ ಹೇಗೆ ಖರೀದಿಸಿದ್ದರು ಎಂದು ನಾನು ಹುಡದ ಕಾರಣ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ದಾವಾ ಐಟಂ ನಂಃ 3 ರ ಆಸ್ತಿಯನ್ನು ಖರೀದಿಸುವಾಗ ಎಷ್ಟು ಹಣ ಖರ್ಚಾಗಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆದಾವಾ ಆಸ್ತಿಯಿಂದ ಕಬ್ಬು ಬೆಳೆದು ಕಾರ್ಖಾನೆಗೆ ಸರಬರಾಜು ಮಾಡುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ. ದಾವಾ

ಐಟಂ ನಂಃ 2 ರಲ್ಲಿ ವ್ಯವಸಾಯ ಮಾಡುವಾಗ ಸಹಕಾರಿ ಸಂಘದಿಂದ ಸಾಲ ಪಡೆಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ ನಂಃ 2 ರಲ್ಲಿ ಭತ್ತವನ್ನು ಎರಡು ಬೆಳೆ ಬೆಳೆಯುತ್ತಿದ್ದರು. ಆ ಜಮೀನಿನಲ್ಲಿ ನೀರು ಇದ್ದರೆ 1 ಬೆಳೆ ಇಲ್ಲದಿದ್ದರೂ ಬೆಳೆಯಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಎಷ್ಟು ಭತ್ತ ಬೆಳೆಯುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಅದೇ ಭತ್ತವನ್ನು ನಮ್ಮ ಊಟಕ್ಕೆ ಬಳಸುತ್ತಿದ್ದೆವು. ಸದರಿ ಭತ್ತ ನಮ್ಮ ಊಟಕ್ಕೆ ಸಾಕಾಗುತ್ತಿತ್ತು ಎಂದರೆ ಸರಿ. ದಾವಾ ಐಟಂ ನಂಃ 2 ರಿಂದ ಯಾವುದೇ ಆದಾಯ ಉಳಿಯುತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ದಾವಾ ಐಟಂ ನಂಃ 1 ರ ಆಸ್ತಿಯನ್ನು ಮಾರಾಟ ಮಾಡಲು ಸಂಪೂರ್ಣ ಹಕ್ಕುಯಿತ್ತು ಎಂದರೆ ಸರಿಯಲ್ಲ. ನನ್ನ ತಂದೆ ಐಟಂ ನಂಃ 1 ರ ಆಸ್ತಿಯನ್ನು ಮಾರಾಟ ಮಾಡುವ ಹಕ್ಕು ಇದ್ದ ಕಾರಣ 3 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆಂದರೆ ತಪ್ಪು ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ಅಕ್ಕನಿಗೆ ಆಸ್ತಿಯನ್ನು ಮಾರಾಟ ಮಾಡಿರುವುದರಿಂದ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮಾರಾಟ ಮಾಡಿರುವ ಬಗ್ಗೆ ಹಕ್ಕು ನಿವೃತ್ತಿ ಪತ್ರ ಬರೆದಿರುವ ಬಗ್ಗೆ ಪ್ರಶ್ನಿಸುವ ಹಕ್ಕು ನನಗಿಲ್ಲ ಎಂದರೆ ಸರಿಯಲ್ಲ. ನಾನೇ ನಿಂತು ನನ್ನ ಮಕ್ಕಳ ಹೆಸರಿಗೆ ದಾವೆ ವಜಾವಾಗುತ್ತದೆ ಎಂದು ತಿಳಿದು ದಾನಪತ್ರ ಬರೆಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸ ಇ ಓ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ ಮದ್ದೂರು.